**ದಿನಾಂಕ: 03-06-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು:-**

**<u>ಪಾಟೀ ಸವಾಲು : ಆರೋಪಿ ಪರ ಶ್ರೀ.ಎಸ್.ಎ.ಜಿ. ವಕೀಲರಿಂದ :</u>**

ಆರೋಪಿತಳು ನನಗೆ 4-5 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿತಳು ನನ್ನ ಹೆಂಡತಿಯ ಸ್ನೇಹಿತೆ ಇರುವುದರಿಂದ ನನಗೆ ಪರಿಚಯ ಇರುತ್ತಾರೆ. ನಾನು ನನ್ನ ಹೆಂಡತಿ ಮತ್ತು ಆರೋಪಿತಳು ಒಬ್ಬರಿಗೊಬ್ಬರು ನಮ್ಮ ಮತ್ತು ಅವರ ಮನೆಗೆ ಹೋಗಿಬಂದು ಮಾಡುತ್ತಿದ್ದೇವೆ ಎಂದರೆ ಸಾಕ್ಷಿಯು ನನ್ನ ಹೆಂಡತಿಯು ಮಾತ್ರ ಅವರ ಮನೆಗೆ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿತಳ ಮನೆಗೆ ನಾನು ಹೋಗಿರುವುದಿಲ್ಲ. ಆರೋಪಿತಳು ಮತ್ತು ಆಕೆಯ ಗಂಡ ಅವರ ಮನೆಯಲ್ಲಿರುತ್ತಾರೆ. ಸದರಿ ನಾನು ಕೊಟ್ಟ ಹಣವನ್ನು ಆರೋಪಿತಳು ಮತ್ತು ಆಕೆಯ ಗಂಡ ಸೇರಿ ಪಡೆದುಕೊಂಡಿರುತ್ತಾರೆ.

ಆರೋಪಿತಳು ಹಣವನ್ನು ನನ್ನ ಕಡೆಯಿಂದ ಪಡೆದುಕೊಂಡಿರುತ್ತಾಳೆ. ಹಣವನ್ನು ಆರೋಪಿತಳ ಕೈಯಲ್ಲಿ ಕೊಟ್ಟಿರುತ್ತೇನೆ. ನನ್ನ ಹೆಂಡತಿ ಆರೋಪಿತಳ ಮನೆಗೆ ಹೋದಾಗ 4-5 ತಾಸು ಇರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತಳು ಸಹಿತ ನಮ್ಮ ಮನೆಗೆ ಕುಟುಂಬದ ಸದಸ್ಯರ ಹಾಗೆ ಇರುತ್ತಿದ್ದರು ಎಂದರೆ ಸರಿಯಲ್ಲ. ನಾನು ಕುಟುಂಬ ಸಮೇತ ಆರೋಪಿತಳ ಮನೆಗೆ ಮತ್ತು ಆರೋಪಿತಳು ಅವಳ ಗಂಡನ ಜೊತೆಗೆ ನಮ್ಮ ಮನೆಗೆ ಬರುತ್ತಿದ್ದರು ಎಂದರೆ ಸರಿಯಲ್ಲ.

ನಾನು ಬೆಳೆ ಕಾಳುಗಳ ವ್ಯಾಪಾರ ಮಾಡುತ್ತೆನೆ. ನಾನು ವ್ಯಾಪಾರ ಮಾಡುವ ಬಗ್ಗೆ ಯಾವುದೇ ಪರವಾನಿಗೆ ಇರುವುದಿಲ್ಲ. ನಾನು ಫೈನಾನ್ಸ & ಬ್ಯಾಂಕಗಳಿಂದ ಜನರಿಗೆ ಸಾಲವನ್ನು ಕೊಡಿಸುವ ವ್ಯವಹಾರ ಮಾಡುತ್ತೆನೆ ಎಂದರೆ ಸರಿಯಲ್ಲ. ನಾನು ಹಲವಾರು ಜನರ ಕಡೆಯಿಂದ ಅವರಿಗೆ ಸಾಲ ಕೊಡಿಸುತ್ತೇನೆ ಎಂದು ಅವರ ಕಡೆಯಿಂದ ದಾಖಲಾತಿಗಳನ್ನು & ಚೆಕ್‌ಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಜನರಿಗೆ ರೂ.1,00,000/- ಸಾಲಕ್ಕೆ ರೂ.25,000/- ಕಮೀಷನ್ ಪಡೆದುಕೊಳ್ಳುತ್ತೆನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)**

**ಜೆ.ಎಂ.ಎಫ್.ಸಿ ನ್ಯಾಯಾಧೀಶರು**
**ಬಸವಕಲ್ಯಾಣ**